ಸರ್ಕಾರದ ವಿವಿಧ ಇಲಾಖಾ ಕಾರ್ಯದರ್ಶಿಗಳ ಕಛೇರಿ ಕಂಪ್ಯೂಟರೀಕರಣ.

267(3403)

ಶ್ರೀ ಯು. ಆರ್. ಸಭಾಪತಿ(ಉಡುಪಿ): ಮಾನ್ಯ ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಂಗಳೂರಿನ ಬಹುಮಹಡಿ ಕಟ್ಟಡದಲ್ಲಿರುವ ಎಷ್ಟು ಇಲಾಖಾ ಕಾರ್ಯದರ್ಶಿಗಳ ಕಛೇರಿಗಳನ್ನು ಕಂಪ್ಯೂಟರೀಕರಣಗೊಳಿಸಲಾಗಿದೆ. (ಇಲಾಖಾವಾರು ವಿವರಗಳನ್ನು ನೀಡುವುದು)

ಆ. ಆಡಳಿತದಲ್ಲಿ ಮಾಹಿತಿ ತಂತ್ರಜ್ಞಾನ ಅಳವಡಿಕೆ ಸರ್ಕಾರದ ನೀತಿಯಾಗಿದ್ದು ಈ ಬಗ್ಗೆ ಪ್ರಗತಿಯ ವಿವರಗಳನ್ನು ನೀಡುವುದು.

ಶ್ರೀ ಎಂ. ಎಂ. ನಾಣಯ್ಯ (ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು):

ಅ. ಬೆಂಗಳೂರಿನ ಬಹು ಮಹಡಿ ಕಟ್ಟಡದ ಮತ್ತು ವಿಧಾನ ಸೌಧದಲ್ಲಿರುವ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳ ಕಛೇರಿಗಳಲ್ಲಿ ಕಂಪ್ಯೂಟರ್‌ಗಳನ್ನು ಇ-ಮೈಲ್ ಸೌಲಭ್ಯಗಳೊಂದಿಗೆ ಒದಗಿಸಿದ್ದು ಅವುಗಳನ್ನು ಕಛೇರಿಯ ದೈನಂದಿನ ಕಾರ್ಯಗಳಿಗೆ ಬಳಸಲಾಗುತ್ತಿದೆ.

ಈ ಕೆಳಕಂಡ ಐದು ಕಾರ್ಯದರ್ಶಿಗಳ ಕಛೇರಿಗಳನ್ನು ಬಹಳಷ್ಟು ಮಟ್ಟಿಗೆ ಗಣಕೀಕರಣಗೊಳಿಸಲಾಗಿದೆ.

1. ಕಂದಾಯ ಇಲಾಖೆ: ಕಂದಾಯ ಕಾರ್ಯದರ್ಶಿಗಳ ಕಛೇರಿಯ ಬಹಳಷ್ಟು ಕಾರ್ಯಗಳನ್ನು ಸಂಪೂರ್ಣ ಗಣಕೀಕರಣಗೊಳಿಸಲಾಗಿದ್ದು LAN ಅಳವಡಿಸಲಾಗಿದೆ. ಕಡತ ಹಾಗೂ ಪತ್ರಗಳ ವಿಲೇವಾರಿ ಗಣಕೀಕರಣಗೊಳಿಸಿದೆ. ಕಂದಾಯ ಕೈಪಿಡಿ, ಕಂದಾಯ ಇಲಾಖೆ ಕಾನೂನು, ಕಾಯ್ದೆ ಮತ್ತು ಸರ್ಕಾರಿ ಆದೇಶಗಳನ್ನು ಅಂತರಜಾಲದ (ವೆಬ್) ಮೂಲಕ ಒದಗಿಸಲಾಗಿದೆ.

2. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್: ಈ ಇಲಾಖೆಯಲ್ಲಿ ಹೆಚ್ಚಿನ ಕಾರ್ಯಗಳನ್ನು ಗಣಕೀಕರಣಗೊಳಿಸಲಾಗಿದೆ. ಇಲಾಖೆಯಲ್ಲಿ ಒಟ್ಟಾರೆ ಒಂದು ಸರ್ವರ್(Server) ಮತ್ತು 30 ಕಂಪ್ಯೂಟರ್‌ಗಳಿವೆ. ಇಲಾಖೆಯಲ್ಲಿನ ಶಾಖಾಧಿಕಾರಿಗಳಿಗೆ ಕಂಪ್ಯೂಟರ್ ನೀಡಿದ್ದು ಎಲ್ಲವನ್ನೂ ಲ್ಯಾನ್‌ಗೆ (LAN) ಅಳವಡಿಸಲಾಗಿದೆ. ಕಡತಗಳ ಚಲನವಲನವನ್ನು ಗಣಕೀಕರಣಗೊಳಿಸಲಾಗಿದೆ.

3. ಆರ್ಥಿಕ ಇಲಾಖೆ: ಆರ್ಥಿಕ ಇಲಾಖೆಯ ಕಾರ್ಯದರ್ಶಿ ಕಛೇರಿಯಲ್ಲಿ

1997ರಿಂದ ಇಲ್ಲಿಯವರೆಗೆ ಇರುವ ಆಯವ್ಯಯ ಮಾಹಿತಿಯನ್ನು ಗಣಕೀಕರಣಗೊಳಿಸಲಾಗಿದೆ. ಲೊಕೋಪಯೋಗಿ ಆರ್ಥಿಕ ಕೋಶವು(PWFC); ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ ಹಾಗೂ ಮುಖ್ಯ ಅಭಿಯಂತರರು, ಜಲಸಂಪನ್ಮೂಲ ಇಲಾಖೆ ಇವರುಗಳಿಗೆ Letter of Credit (LOC) ನೀಡುವುದನ್ನು ಗಣಕೀಕರಿಸಲಾಗಿದೆ. ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಹಣ ಬಿಡುಗಡೆಗೊಳಿಸುವುದನ್ನು ಸಹ ಗಣಕೀಕರಿಸಲಾಗಿದೆ.

4. ಲೊಕೋಪಯೋಗಿ ಇಲಾಖೆ: ಈ ಇಲಾಖೆಯ ಕಾರ್ಯದರ್ಶಿಯವರ ಕಛೇರಿಯ ಸಾಕಷ್ಟು ಕಾರ್ಯಗಳನ್ನು ಗಣಕೀಕರಣಗೊಳಿಸಲಾಗಿದೆ. ಬೆಂಟ್ಲೀಸ್ ಮೈಕ್ರೋ ಸ್ಟೇಷನ್ (GIS) ಮತ್ತು ಬಿಲ್ಡ್ ಸೂಪರ್ ಫಾಸ್ಟ್ ಸಾಫ್ಟ್‌ವೇರ್‌ಗಳನ್ನು ಉಪಯೋಗಿಸಲಾಗುತ್ತಿದೆ.

5. ಸಂಸದೀಯ ವ್ಯವಹಾರಗಳು: ಈ ಇಲಾಖೆಯಲ್ಲಿ (LAN) ಅಳವಡಿಸಲಾಗಿದ್ದು, ರಾಜ್ಯ ಕಾಯ್ದೆಗಳನ್ನು ಗಣಕೀಕರಿಸಲಾಗಿದೆ. ಉಳಿದ ಇಲಾಖೆಗಳಲ್ಲಿ ಗಣಕೀಕರಣ ಕಾರ್ಯ ಪ್ರಗತಿಯಲ್ಲಿದೆ.

ಆ. ಪಾರದರ್ಶಕ ಆಡಳಿತವನ್ನು (e-Governance) ಸಾಮಾನ್ಯ ಜನತೆಗೆ ನೀಡುವುದು ಕರ್ನಾಟಕ ಸರ್ಕಾರದ ಉದ್ದೇಶವಾಗಿದೆ. ಬಹಳಷ್ಟು ಸರ್ಕಾರದ ಇಲಾಖೆಗಳು ತಮ್ಮ ಕಾರ್ಯ ಚಟುವಟಿಕೆಗಳನ್ನು ಗಣಕೀಕರಣಗೊಳಿಸುವ ಕೆಲಸವನ್ನು ಕೈಗೆತ್ತಿಕೊಂಡಿವೆ.

ಈ ಕೆಳಕಂಡ ಇಲಾಖೆಗಳು ಗಣಕೀಕರಣ ಕಾರ್ಯದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದೆ.

1. ಮುಖ್ಯಮಂತ್ರಿಗಳ ಮಾಹಿತಿ ವ್ಯವಸ್ಥೆ (ಮುಖ್ಯವಾಹಿನಿ)

2. ಶಿಕ್ಷಣ ಇಲಾಖೆ

3. ಕಂದಾಯ ಇಲಾಖೆ (ಭೂಮಿ)

4. ನೋಂದಣಿ ಮತ್ತು ದಾಖಲಾತಿ ಇಲಾಖೆ (ನೊಂದಣಿ)

5. ಖಜಾನೆ ಇಲಾಖೆ (ಖಜಾನೆ)

6. ವಾಣಿಜ್ಯ ತೆರಿಗೆ ಇಲಾಖೆ (ತೆರಿಗೆ)

7. ಕರ್ನಾಟಕ ಸರ್ಕಾರದ ಜೀವ ವಿಮಾ ಇಲಾಖೆ

8. ಪೋಲೀಸ್ ಇಲಾಖೆ (ಪೊಲೀಸ್ ಮಾಹಿತಿ ತಂತ್ರಜ್ಞಾನ - 2000)

9. ಸಾರಿಗೆ ಇಲಾಖೆ (ಸಾರಿಗೆ)

10. ರೇಷ್ಮೆ ಇಲಾಖೆ (ರೇಷ್ಮೆ)

11. ಲೋಕೋಪಯೋಗಿ ಇಲಾಖೆ

12. ನಗರಾಭಿವೃದ್ಧಿ ಇಲಾಖೆ

13. ಕೃಷಿ ಇಲಾಖೆ

14. ಸಚಿವಾಲಯದ ಲೋಕಲ್ ಏರಿಯ ನೆಟ್ ವರ್ಕ್(LAN)

ಶ್ರೀ ಯು.ಆರ್.ಸಭಾಪತಿ: ಮಾನ್ಯ ಸಭಾಧ್ಯಕ್ಷರೆ, ಪ್ರತಿ ವಿಧಾನಸಭೆಯಲ್ಲಿ ನಾನು ಈ ಪ್ರಶ್ನೆಯನ್ನು ಕೇಳಿದ್ದಕ್ಕೆ ಇದೆ ಉತ್ತರ ಬರುತ್ತಿದೆ, ಈ ಯೋಜನೆ ಅನುಷ್ಠಾನವಾಗಬೇಕೇ ಬೇಡವೆ? ಇಲಾಖಾ ಕಾರ್ಯದರ್ಶಿಗಳ ಮಟ್ಟದಲ್ಲಿ ಕೇವಲ ಬೆರಳಚ್ಚಿಗಾಗಿ ಮಾತ್ರ ಕಂಪ್ಯೂಟರ್ ಅನ್ನು ಉಪಯೋಗಿಸುತ್ತಿದ್ದಾರೆ, ಯಾವಾಗ ಕಂಪ್ಯೂಟರ್ ಅನ್ನು ಜನಸಾಮಾನ್ಯರ ಸೇವೆಗೆ ದೊರಕುವಂತೆ ಮಾಡುತ್ತೀರಿ? ಈ ಮಾಹಿತಿ ತಂತ್ರಜ್ಞಾನ ಅಳವಡಿಕೆ ಸರ್ಕಾರದ ಒಂದು ನೀತಿಯಾಗಿರುವುದರಿಂದ ಪ್ರತಿ ತಿಂಗಳು ಪ್ರಗತಿ ಪರಿಶೀಲನೆಯನ್ನು ಮಾಡಬೇಕು, ಅದನ್ನು ಮಾಡುತ್ತಿದ್ದೀರಾ? ಮಾಡಲಿಲ್ಲವೆಂದರೆ ಏತಕ್ಕಾಗಿ ಮಾಡಿಲ್ಲ? ಇನ್ನುಮುಂದೆ ಮಾಡುತ್ತೀರಾ? ವಿವಿಧ ಇಲಾಖೆಗಳಿಗೆ ಸಾಫ್ಟ್‌ವೇರ್ ತಯಾರು ಮಾಡಲು ಬೇರೆ ಬೇರೆ ಕಂಪನಿಗಳಿಗೆ ಹೋಗುವ ಅವಶ್ಯಕತೆ ಇಲ್ಲ, ಸರ್ಕಾರಿ ಸಂಸ್ಥೆಯಾದ ಕಿಯಾನಿಕ್ಸ್‌ಗೆ ಇದನ್ನು ವಹಿಸುತ್ತೀರಾ?

ಶ್ರೀ ಎಂ.ಎಂ.ನಾಣಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಪ್ರಶ್ನೆ ಸಹಜವಾಗಿದ್ದು ಸರ್ಕಾರದ ಕಳಕಳಿಯೂ ಅದೇ ಆಗಿದೆ. ಆದಷ್ಟು ಬೇಗ ಜಾರಿಗೆ ತರಬೇಕೆಂದು ಎಲ್ಲಾ ಇಲಾಖೆಗಳಿಗೂ ಸಚಿವರು ಮುಖ್ಯ ಕಾರ್ಯದರ್ಶಿಗಳು ಸೇರಿದಂತೆ ಸೂಕ್ತ ಸುತ್ತೋಲೆ ಹಾಗೂ ನಾರ್ಮ್ಸ್‌ಗಳು ಆಗಾಗ್ಗೆ ಹೋಗುತ್ತಿರುತ್ತದೆ. ಈ ಸಂಬಂಧವಾಗಿ ಈಗಾಗಲೇ 1300 ಅಧಿಕಾರಿಗಳನ್ನು ತರಬೇತಿಗೊಳಿಸಿ, ಸುಮಾರು ವಿವಿಧ ಇಲಾಖೆಗಳಲ್ಲಿ ಕಂಪ್ಯೂಟರ್ ಅಳವಡಿಸಿ ಡಾಟ ಸಂಗ್ರಹಿಸಿ ಇಟ್ಟುಕೊಳ್ಳಲಾಗಿದೆ. ಮಾರ್ಚ್ 2002ರೊಳಗೆ ಕಂಪ್ಯೂಟರ್ ಅಳವಡಿಕೆಯ ಕೆಲಸ ಪೂರ್ಣಗೊಳಿಸಿ ಮಾಹಿತಿ ತಂತ್ರಜ್ಞಾನದ ಉಪಯೋಗ ಪಡೆದುಕೊಳ್ಳಬೇಕೆನ್ನುವ ನಿರ್ದೇಶನವನ್ನು ಕೊಡಲಾಗುವುದು, ಇದನ್ನು ಮೇಲ್ವಿಚಾರಣೆ ಮಾಡಲು ಒಂದು ಮಾನಿಟರಿಂಗ್ ಕಮಿಟಿಯನ್ನೂಕೂಡ ರಚಿಸಬೇಕೆಂದು ಸರ್ಕಾರ ಗಂಭೀರವಾಗಿ ಆಲೋಚನೆ ಮಾಡುತ್ತಿದೆ. ಮಾನ್ಯ ಸದಸ್ಯರ ಕಾಳಜಿ ನಮಗೆ ಅರ್ಥವಾಗಿದೆ. ಆ ಕಡೆ ಸರ್ಕಾರ ಗಂಭೀರವಾದ ಚಿಂತನೆಯನ್ನು ಮಾಡುತ್ತದೆಂದು

ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಯು.ಆರ್.ಸಭಾಪತಿ: ಇದಕ್ಕೆ ಸಂಪನ್ಮೂಲ ಸಂಗ್ರಹ ಮಾಡಲು ಮಾಹಿತಿ ಬಾಂಡ್ ಪ್ರಕಟಣೆ ಮಾಡಿ ಸುಮಾರು 300 ಕೋಟಿಗಳ ಗುರಿಯನ್ನು ನಿಗದಿ ಮಾಡಲಾಗಿದೆ, ಕೇವಲ 60 ಕೋಟಿ ರೂಪಾಯಿ ಮಾತ್ರ ಸಂಗ್ರಹವಾಗಿದೆ, ಆ ಗುರಿಯನ್ನು ಯಾವಾಗ ಪೂರ್ಣಗೊಳಿಸುತ್ತೀರಿ.

ಶ್ರೀ ಎಂ.ಎಂ.ನಾಣಯ್ಯ: ಸರ್ಕಾರ ಈಗಾಗಲೇ 60 ಕೋಟಿ ರೂಪಾಯಿಗಳನ್ನು ವಿವಿಧ ಇಲಾಖೆಗಳಿಗೆ ಹಂಚಿ ಈ ಮಾಹಿತಿ ತಂತ್ರಜ್ಞಾನದ ಅಭಿವೃದ್ಧಿಗೆ ಖರ್ಚು ಮಾಡುತ್ತಿದೆ, ಮತ್ತೆ ಎರಡನೆ ಹಂತಕ್ಕೆ ಸಧ್ಯದಲ್ಲೇ ಸರ್ಕಾರ ನೋಟಿಫಿಕೇಷನ್ ಹೊರಡಿಸಲಿದೆ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವತಿಯಿಂದ ಕುಡಿಯುವ ನೀರಿನ ಸೌಲಭ್ಯ.

269(2797)

ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್‌ಖಾನ್(ಹುಬ್ಬಳ್ಳಿ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೊಂದರೆ ಹೋಗಲಾಡಿಸಲು ಕಾಳನದಿಯಿಂದ ನೀರು ಸರಬರಾಜು ಮಾಡುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

2. ಹಾಗಿದ್ದಲ್ಲಿ ಸದರಿ ಯೋಜನೆಗೆ ತಗಲುವ ಅಂದಾಜು ವೆಚ್ಚ ಎಷ್ಟು?

3. ಈ ಕಾಮಗಾರಿ ಯಾವ ವರ್ಷದಿಂದ ಕೈಗೆತ್ತಿಕೊಳ್ಳಲಾಗುವುದು?

4. ಹಾಗಿಲ್ಲದಿದ್ದಲ್ಲಿ ಈ ಯೋಜನೆ ಕೈಗೆತ್ತಿಕೊಳ್ಳದಿರಲು ಕಾರಣವೇನು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಯವರು):

1. ಇಲ್ಲ.

2. ಉದ್ಭವಿಸುವುದಿಲ್ಲ.

3. ಉದ್ಭವಿಸುವುದಿಲ್ಲ.